# ಇನ್ವೆಂಚರಿಂಗ್ ಸಪ್ತಾಹ

## ಅನನ್ಯ ರಾಮ್‌ಗೋಪಾಲ್

ಇನ್ವೆಂಚರ್ ಅಕಾಡೆಮಿಯ ಒಳಾಂಗಣಕ್ಕೆ ನಾನು ಮೊದಲಿಗೆ ಹೆಜ್ಜೆಯಿಡುವಾಗ ಬಹಳ ಅಳುಕುತ್ತಲೇ ಕಾಲಿಟ್ಟೆ ಎಂದು ಹೇಳಬೇಕು. ಹೊಚ್ಚ ಹೊಸ ನಗರದಲ್ಲಿ ತೀರ ಹೊಸದಾಗಿರುವ ಶಾಲೆಯಲ್ಲಿ–ಒಂಬತ್ತನೇ ತರಗತಿಗೆ ಸೇರಿ ಓದುವುದೆಂದರೆ ಧೈರ್ಯಕ್ಕೆ ಸವಾಲೇ ಸರಿ. ಈಗೇನೋ ನನ್ನ ತರಗತಿ ನನ್ನ ನೆಚ್ಚಿನ ತಾಣಗಳಲ್ಲಿ ಒಂದು. ಅಂದು ನನ್ನ ತರಗತಿಗೆ ಮೊದಲ ಬಾರಿ ಪ್ರವೇಶಿದಾಗ ಕಂಡದ್ದು, ಒಬ್ಬರ ಸುತ್ತ ಇನ್ನೊಬ್ಬರು ಗುಂಪುಗೂಡಿ, ಕೆಫೀನ್‌ನ ಪ್ರಭಾವದಲ್ಲಿರುವ ಶಿಶುಗಳಂತೆ ಹರಟೆ ಹೊಡೆಯುತ್ತಿದ್ದ ಮತ್ತು ಕಿರುಚಾಡುತ್ತಿದ್ದ ವಿದ್ಯಾರ್ಥಿಗಳ ಸಮೂಹ. ಅಲ್ಲದೇ, ಒಬ್ಬ ಹೊಸ ವಿದ್ಯಾರ್ಥಿಗೆ ಭಯ ಹುಟ್ಟಿಸಲು ಇದಕ್ಕಿಂತ ಹೆಚ್ಚು ಏನು ಬೇಕು? ಇದು ಅವರ ಅಖಾಡ ಮತ್ತು ನಾನು ಏನು ಮಾಡಬೇಕೆಂಬ ಯಾವ ಸುಳಿವೂ ನನ್ನಲ್ಲಿ ಇರಲಿಲ್ಲ.

ನನ್ನ ಅದೃಷ್ಟಕ್ಕೆ, ಇನ್ವೆಂಚರ್ ಇತರ ಹೆಚ್ಚಿನ ಶಾಲೆಗಳಂತಲ್ಲ. ವರ್ಷದ ಆರಂಭದಲ್ಲಿಯೇ ನೇರವಾಗಿ ಪಾಠ ಪ್ರವಚನಕ್ಕೆ ತೊಡಗುವುದರಲ್ಲಿ ಅವರಿಗೆ ನಂಬಿಕೆಯಿರಲಿಲ್ಲ. ಅದರ ಬದಲಾಗಿ, ವಿದ್ಯಾರ್ಥಿಗಳನ್ನು ಅದರಲ್ಲೂ ಹೊಸಬರನ್ನು ಒಮ್ಮೆಲೆ ದೈನಂದಿನ ಯಾಂತ್ರಿಕತೆಗೆ ತಳ್ಳುವ ಬದಲಾಗಿ ತಮ್ಮ ಶಾಲಾ ಪರಿಸರಕ್ಕೆ ಹೊಂದಿಕೊಳ್ಳಲು ಅಥವಾ ಮರುಹೊಂದಿಕೊಳ್ಳಲು ಅವರಿಗೆ ಸಮಯವಕಾಶವನ್ನು ಅವರು ನೀಡುತ್ತಾರೆ. ಹೀಗಾಗಿ ಇನ್ವೆಂಚರಿಂಗ್ ಎಂಬ ಪರಿಕಲ್ಪನೆ ಹುಟ್ಟಿಕೊಂಡಿತು. ಮೋಜಿನ ಚಟುವಟಿಕೆಗಳ ಮೂಲಕ–ಸಾಮಾನ್ಯವಾಗಿ ಒಂದು ದೊಡ್ಡ ಪ್ರಮಾಣದ ಕಲಾ ಯೋಜನೆಯನ್ನು ಮಾಡುವ ಮೂಲಕ ವಿದ್ಯಾರ್ಥಿಗಳು ಪರಸ್ಪರರನ್ನು ಅರಿತುಕೊಳ್ಳುವುದಕ್ಕೆ ಇಡೀ ಶಾಲೆಗೆ ಮೀಸಲಾದ ವಾರ ಅದು. ಅಂಥ ಯೋಜನೆಯ ಮೂಲಕ ವಿದ್ಯಾರ್ಥಿಗಳು ತಾವು ಸಾಧಿಸುತ್ತಿರುವ ಪ್ರಗತಿಯನ್ನು ಕಾಣಲು ಸಾಧ್ಯವಾಗುತ್ತದೆ, ಮುಂದಿನ ಯೋಜಿನೆ ತಯಾರಿಸಬಹುದು, ಮತ್ತು ತಮಗೆ ನೀಡಲಾದ ಕೆಲಸವು ಪೂರ್ಣ–ಗೊಂಡಿರುವುದನ್ನು ಕುರಿತು ಸಂತೃಪ್ತಿಯ ಭಾವನೆಗಳನ್ನು ಹೊಂದಲು ಅವರಿಗೆ ಸಾಧ್ಯವಾಗುವುದು – ಇದೇ ಈ ಯೋಜನೆಯ ಹಿಂದಿನ ಮುಖ್ಯ ಆಶಯ. ವಿದ್ಯಾರ್ಥಿಗಳಿಗೆ ಅವರು ಮಾಡ ಬಹುದಾದ ವೈವಿಧ್ಯಮಯವಾದ ಯೋಜನೆಗಳನ್ನು ಒದಗಿಸಲಾಗುವುದು ಮತ್ತು ಅವರು ತಮಗೆ ಹಿಡಿಸಿದ ಯಾವುದಾದರೂ ಯೊಜನೆಯನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನು ಅವರಿಗೆ ನೀಡಲಾಗುವುದು.

ಕಳೆದ ವರ್ಷ, ನಮಗೆ ವಿವಿಧ ಆಯ್ಕೆಗಳಿದ್ದವು–ಹಕ್ಕಿಗೂಡನ್ನು ನಿರ್ಮಿಸುವುದು, ಭಿತ್ತಿಚಿತ್ರಕ್ಕೆ ಬಣ್ಣ ಹಾಕುವುದು, ಹೂದೋಟವನ್ನು ಅಲಂಕರಿಸುವುದು, ಇತ್ಯಾದಿ. ನಾನು ಹಕ್ಕಿ ಗೂಡನ್ನು ನಿರ್ಮಿಸುವುದನ್ನು ಆಯ್ಕೆ ಮಾಡಿಕೊಂಡೆ. ಅದೇ ಚಟುವಟಿಕೆಯನ್ನು ಮಾಡಲಿರುವ ವಿವಿಧ ತರಗತಿಗಳಿಗೆ ಸೇರಿದ 10 ವಿದ್ಯಾರ್ಥಿಗಳ ಗುಂಪಿಗೆ ನನ್ನನ್ನು ಸೇರಿಸಲಾಗಿತ್ತು. ನಾನು ಮೊದಲು ಆಯ್ಕೆ ಮಾಡಿ ಕೊಂಡಾಗ ಎಲ್ಲ ಯೋಜನೆಗಳಲ್ಲಿಯೇ ಅದು ಅತ್ಯಂತ ಸುಲಭವಾದದ್ದೆಂದು ನನಗೆ ಅನಿಸಿತ್ತು. ಆದರೆ ಮಾಡುತ್ತಾ ಹೋದಾಗ ಹಕ್ಕಿ ಗೂಡನ್ನು ನಿರ್ಮಿಸುವುದು ಸರಳವಾದ ಕೆಲಸವೇನಲ್ಲವೆಂದು ಮನದಟ್ಟಾಯಿತು.

ನಾವು ಏನೆಲ್ಲಾ ಸಾಮಗ್ರಿಗಳು ಅಗತ್ಯ ಬೀಳಬಹುದು ಎಂಬುದನ್ನು ಒಳಗೊಂಡಂತೆ ಸಾಕಷ್ಟು ಯೋಜನೆ ಮಾಡಬೇಕಾಯಿತು. ಸಾಧ್ಯವಿರುವ ವಿನ್ಯಾಸಗಳನ್ನು ರೂಪಿಸುವುದು ಮತ್ತು ತಜ್ಞ ಸಲಹೆಗಳನ್ನು ಮತ್ತು ಅಗತ್ಯವಿರುವ ಇತರ ಸಹಾಯಗಳನ್ನು ಪಡೆದುಕೊಳ್ಳುವುದು ಇವನ್ನೆಲ್ಲಾ ಮಾಡಬೇಕಾಗಿ ಬಂತು. ನಮ್ಮ ಯೋಜನೆಯನ್ನು ಹೇಗೆ ಮಾಡಬಹುದು ಎಂಬ ಒಂದು ಸ್ಥೂಲ ಕಲ್ಪನೆಯು ನಮಗೆ ದೊರಕಿದ ಬಳಿಕ ಅದನ್ನು ವಾಸ್ತವವಾಗಿ ಕಾರ್ಯಗತಗೊಳಿಸುವ ಸಮಯ ಬಂತು. ಏನೆಲ್ಲಾ ಯೋಜನೆಗಳನ್ನು ನಾವು ರೂಪಿಸಿದ್ದರೂ ವಾಸ್ತವವಾಗಿ ಒಂದು

ಹಕ್ಕಿಗೂಡನ್ನು ನಿರ್ಮಿಸುವುದರಲ್ಲೇ ಇರೋದು ಪಜೀತಿ ಎಂಬುದು ಮನವರಿಕೆಯಾಯಿತು. ನಮ್ಮ ಸಮಸ್ಯೆ ಬಗೆಹರಿಸುವಿಕೆ ಕೌಶಲ್ಯಗಳು ಸಹಾಯಕ್ಕೆ ಬಂದಿರುವುದು ಈ ಹಂತದಲ್ಲೇ; ಹೇಗಾದರೂ ಮಾಡಿ ಸಂಪೂರ್ಣ ಸೋಲಿನಿಂದ ಪಾರಾಗಬೇಕೆಂದು ಕೊನೇ ಪ್ರಯತ್ನವನ್ನು ಮಾಡುತ್ತಿರ–ಬೇಕಾದರೆ, ಜೊತೆಯಾಗಿ ಕೆಲಸ ಮಾಡುವ ಹಾಗೂ ಪರಸ್ಪರರ ಮೇಲೆ ಅವಲಂಬಿಸಿ ಕೆಲಸವನ್ನು ಪೂರ್ತಿಗೊಳಿಸುವುದರ ಮಹತ್ವವನ್ನು ಕೂಡಾ ನಾವು ಮನಗಂಡೆವು.

ವಾರದ ಕೊನೆಯಲ್ಲಿ ನಾವು ಪೂರ್ತಿಗೊಳಿಸಿದ ಒಂದು ಸುಂದರವಾದ ಹಕ್ಕಿಗೂಡನ್ನು ಮೆಚ್ಚುಗೆಯಿಂದ ದಿಟ್ಟಿಸುವ ಪವಾಡ ನಮ್ಮದಾಯಿತು. ನನ್ನ ಮಟ್ಟಿಗೆ ಹೇಳುವುದಾದರೆ, ಆ ವಾರದಲ್ಲಿ ನಾನು ಸಾಧಿಸಿದ ಕೆಲಸವು ಅದೊಂದೇ ಆಗಿರಲಿಲ್ಲ. ಈ ಪ್ರಕ್ರಿಯೆಯಲ್ಲಿ ನಾನು ಅಚಾನಕ್ಕಾಗಿ ಹಲವಾರು ಗೆಳತಿಯರನ್ನು ಸಂಪಾದಿಸಿದ್ದೆ ಹಾಗೂ ಯಾರೋ ಹೊರಗಿನವಳಾಗಿ ನೋಡದೇ ಎಲ್ಲವನ್ನೂ ಒಳಗಿನವಳಾಗಿ ನೋಡುವುದು ಅದ್ಭುತ ಎನಿಸಿತು.

ಇನ್ವೆಂಚರಿಂಗ್ ಸಪ್ತಾಹದ ಕೊನೆಯಲ್ಲಿ ಶುಕ್ರವಾರದಂದು 4 ರಿಂದ 10 ನೇ ತರಗತಿಯಲ್ಲಿರುವ ವಿದ್ಯಾರ್ಥಿಗಳಿಗೆ ರಾತ್ರಿ–ವಿಶ್ರಾಂತಿಯ ಕಾರ್ಯಕ್ರಮವಿರುತ್ತದೆ. ಈ ರಾತ್ರಿ ವಿಶ್ರಾಮದ ಕಾರ್ಯಕ್ರಮವು ಇನ್ವೆಂಚರ್ ಸಪ್ತಾಹದ ಬಹು ಮುಖ್ಯ ಭಾಗ. ಕೇವಲ ಒಂದು ವಾರ ಮಾತ್ರ ತನ್ನ ಸುತ್ತಲ ಜನರೊಂದಿಗೆ ಪರಿಚಿತಳಾದ ಒಬ್ಬ ಹೊಸ ವಿದ್ಯಾರ್ಥಿನಿಗೆ ಈ ರಾತ್ರಿ ವಿಶ್ರಾಂತಿಯ ಅವಧಿಯು ಒಂದು ಅತ್ಯದ್ಭುತವಾದ ಅನುಭವವಾಗಿತ್ತು. ಅದು ನನ್ನ ಎಲ್ಲಾ ನಿರೀಕ್ಷೆಗಳನ್ನು ಮೀರಿತ್ತು ಮತ್ತು ನಾನು ಇನ್ನಷ್ಟು ಹೆಚ್ಚು ಬಯಸುವಂತೆ ಮಾಡಿತ್ತು. ಅದು ಸೂರ್ಯೋದಯದವರೆಗೆ ಕಾಡು ಹರಟೆಯಲ್ಲಿ ಸಮಯ ಕಳೆದಿದ್ದಾಗಲೀ ಅಥವಾ ಮಧ್ಯರಾತ್ರಿ ಮೀರಿ ಅಂಗಳದಲ್ಲಿ ನರ್ತಿಸಿದ್ದಾಗಲೀ, ಅಲ್ಲಿ ಪ್ರತಿಯೊಬ್ಬರಿಗೂ ಏನಾದರೂ ಒಂದು ಇಂತಹ ಅನುಭವ ದೊರಕಿತ್ತು. ಇದೇ ಮೊದಲ ಬಾರಿಗೆ ನಾನು ಇನ್ವೆಂಚರ್‌ಗೆ ಸೇರಿದವಳಾಗಿದ್ದೇನೆಂಬ ಭಾವನೆಯೊಂದಿಗೆ ಮರುದಿನ ನಾನು ಮನೆಗೆ ಹಿಂತಿರುಗಿದೆ.

ಇನ್ವೆಂಚರಿಂಗ್ ಅನುಭವ ಇಲ್ಲದೆ ಇದ್ದರೂ ಕಾಲಾಂತರದಲ್ಲಿ ನಾನು ಶಾಲೆಯಲ್ಲಿ ಗೆಳೆಯರನ್ನು ಸಂಪಾದಿಸುತ್ತಿದ್ದೆ ನಿಜ. ಆದರೆ ಶಾಲೆಯ ಆ ಒಂದು ಸಪ್ತಾಹವು ಆ ಸಮಯದಲ್ಲಿ ನನಗೇನು ಅಗತ್ಯವಿತ್ತೋ ಅದನ್ನೇ ನಿಖರವಾಗಿ ನೀಡಿತ್ತು. ಅದು ನನ್ನಲ್ಲಿ ಆತ್ಮವಿಶ್ವಾಸ ಬೆಳೆಯಲು ಸಹಕಾರಿಯಾಯಿತು ಮತ್ತು ಅದು ನನ್ನಲ್ಲಿ ಹೊಣೆಹೊತ್ತು ಕೆಲಸಮಾಡುವ ಮನೋಭಾವವನ್ನು ಹುಟ್ಟುಹಾಕಿ ಒಂದು ತಂಡದಲ್ಲಿ ಹೇಗೆ ಕೆಲಸ ಮಾಡಬೇಕೆಂದು ಯೋಚಿಸಲು ಕೂಡಾ ಸಹಾಯ ಮಾಡಿತು. ಇವಿಷ್ಟೇ ಅಲ್ಲದೆ, ನಾನು ಸೃಜನಾತ್ಮಕವಾಗಿ ಮತ್ತು ನಾವೀನ್ಯಪೂರ್ಣವಾಗಿರಲು ಮತ್ತು ಅದೇ ಸಮಯದಲ್ಲಿ ನನಗೆ ನಾನೇ ಸವಾಲೊಡ್ಡಿಕೊಂಡು ನಾನು ಇಷ್ಟು ವರ್ಷಗಳಲ್ಲಿ ಸಂಪಾದಿಸಿದ ಕೌಶಲ್ಯಗಳನ್ನು ಬಳಸಲು ನನ್ನನ್ನು ಅದು ಪ್ರೋತ್ಸಾಹಿಸಿತು.

ಇನ್ವೆಂಚರಿಂಗ್ ಅನುಭವ ಇಲ್ಲದೆಯೂ ಕಾಲಾನಂತರದಲ್ಲಿ ನಾನು ಶಾಲೆಯಲ್ಲಿ ಗೆಳೆಯರನ್ನು ಸಂಪಾದಿಸುತ್ತಿದ್ದೆ ನಿಜ. ಆದರೆ ಶಾಲೆಯ ಆ ಒಂದು ವಾರವು ಆ ಸಮಯದಲ್ಲಿ ನನಗೆ ಏನೇನು ಅಗತ್ಯವಿತ್ತೋ ಅದನ್ನೇ ನಿಖರವಾಗಿ ನನಗೆ ನೀಡಿತ್ತು. ಅದು ನನ್ನಲ್ಲಿ ಆತ್ಮವಿಶ್ವಾಸವನ್ನು ಬೆಳೆಸಲು ಸಹಾಯಕಾರಿಯಾಯಿತು ಮತ್ತು ಅದು ನನ್ನಲ್ಲಿ ಜವಾಬ್ದಾರಿ ಹೊತ್ತು ಕೆಲಸಮಾಡುವ ಮನೋಭಾವವನ್ನು ಹುಟ್ಟುಹಾಕಿ ಒಂದು ತಂಡದಲ್ಲಿ ಹೇಗೆ ಕೆಲಸ ಮಾಡಬೇಕೆಂದು ಯೋಚಿಸಲು ಕೂಡಾ ಸಹಾಯ ಮಾಡಿತು. ಇವಿಷ್ಟೇ ಅಲ್ಲದೆ, ನಾನು ಸೃಜನಾತ್ಮಕವಾಗಿ ಮತ್ತು ನಾವೀನ್ಯ ಪೂರ್ಣವಾಗಿರಲು ಮತ್ತು ಅದೇ ಸಮಯದಲ್ಲಿ ನನಗೆ ನಾನೇ ಸವಾಲೊಡ್ಡಲು ಮತ್ತು ನಾನು ಇಷ್ಟು ವರ್ಷಗಳಲ್ಲಿ ಸಂಪಾದಿಸಿದ ಕೌಶಲ್ಯಗಳನ್ನು ಬಳಸಲು ನನ್ನನ್ನು ಅದು ಪ್ರೋತ್ಸಾಹಿಸಿತು.

ಎಲ್ಲಕ್ಕೂ ಮಿಗಿಲಾಗಿ, ನಾನು ಆನಂದವಾಗಿ ಸಮಯವನ್ನು ಕಳೆಯುವುದಕ್ಕೆ ಮತ್ತು ಕೆಲವು ಆತ್ಮೀಯ ಗೆಳತಿಯರನ್ನು ಸಂಪಾದಿಸುವುದಕ್ಕೆ ಸಹಾಯವಾಯಿತು–ಇವೆಲ್ಲವುಗಳಿಗಾಗಿ ನಾನು ಇನ್ವೆಂಚರಿಂಗ್‌ಗೆ ಚಿರಋಣಿಯಾಗಿದ್ದೇನೆ. ಈಗ ಒಂದು ವರ್ಷ ಕಳೆದಿದೆ. ಆದರೆ ನನ್ನ ಮೊದಲ ಇನ್ವೆಂಚರಿಂಗ್ ಅನುಭವ ನನ್ನ ಮನದಲ್ಲಿ ಹಚ್ಚ ಹಸುರಾಗಿಯೇ ಉಳಿದಿದೆ.

**ಅನನ್ಯ ರಾಂಗೋಪಾಲ್** ಅವರು ಇನ್ವೆಂಚರ್ ಅಕಾಡೆಮಿಯಲ್ಲಿ 10 ನೇ ತರಗತಿಯಲ್ಲಿ ಓದುತ್ತಿದ್ದಾರೆ. ಅವರನ್ನು ananya.ramgopal@gmail.com ನಲ್ಲಿ ಸಂಪರ್ಕಿಸಬಹುದು.

